# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿ:1650/2022

ಪ್ರಾಸಾ–07, ಚಾಸಾ–05

| | | |
|---|---|---|
| ಸಾಕ್ಷಿದಾರರ ಹೆಸರು | : | ಮೋಹನ್ ಕುಮಾರ. ಆರ್ |
| ತಂದೆಯ ಹೆಸರು | : | ರಾಮುನಾಯಕ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ, ಚಾಮರಾಜನಗರ ಪಟ್ಟಣ ಠಾಣೆ |
| ವಾಸ | : | ಚಾಮರಾಜನಗರ |

ಸಾಕ್ಷಿಗೆ ದಿನಾಂಕ: 12.07.2024ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ:**

2014 ರಿಂದ 2021ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕ: 24.06.2021ರಂದು ಮದ್ಯಾಹ್ನ: 2.30 ಗಂಟೆ ಸಮಯದಲ್ಲಿ ಚಾಸಾ–1, 4ರವರ ಜೊತೆ ಎಡಪುರ ಗ್ರಾಮದ ಕಡೆ ಗಸ್ತಿನಲ್ಲಿದ್ದಾಗ ಚಾಸಾ–1ರವರಿಗೆ ಬಂದ ಬಾತ್ಮಿ ಏನೆಂದರೆ, ಕೆ.ಕೆ. ಹುಂಡಿ ಕಡೆಯಿಂದ ಶಿವಪುರ ಗ್ರಾಮದ ಕಡೆಗೆ ಒಬ್ಬ ಅಸಾಮಿಯೂ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮ ಮದ್ಯವನ್ನು ತೆಗೆದುಕೊಂಡು ಶಿವಪುರದ ಕಡೆಗೆ ಬರುತ್ತಿದ್ದನೆಂದು ಖಚಿತ ಮಾಹಿತಿ ಮೇರೆಗೆ ದಾರಿಯಲ್ಲಿ ಬರುತ್ತಿದ್ದ ಪಂಚರಾದ ಚಾಸಾ–2 ಮತ್ತು 3ರವರನ್ನು ಪಂಚರಾಗಲೂ ಮನವಿ ಮಾಡಿಕೊಂಡು ಅವರು ಒಪ್ಪಿದ ಮೇರೆಗೆ ಅವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಮ: 2.40 ಗಂಟೆ ಸಮಯಕ್ಕೆ ಶಿವಪುರ ಗ್ರಾಮದ ಬಸ್ ನಿಲ್ದಾಣದ ಬಳಿ ಬಂದು ಜೀಪನ್ನು ಬಸ್ ನಿಲ್ದಾಣದ ಹಿಂಭಾಗ ಮರೆಯಾಗಿ ನಿಲ್ಲಿಸಿ, ಪಂಚರು ಮತ್ತು ಸಿಬ್ಬಂದಿಗಳ ಜೊತೆ ಕಾಯುತ್ತಾ ನಿಂತಿದ್ದಾಗ, ಕೆ.ಕೆ. ಹುಂಡಿ ಕಡೆಯಿಂದ ಒಬ್ಬ ಅಸಾಮಿಯು ರಸ್ತೆ ಬದಿಯಲ್ಲಿ ಒಂದು ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ನಡೆದುಕೊಂಡು ಬರುತ್ತಿದ್ದಾಗ, ಆತನ ಮೇಲೆ ಅನುಮಾನಗೊಂಡು ಆತನನ್ನು ಪಂಚರು ಮತ್ತು ಸಿಬ್ಬಂದಿಗಳ ಜೊತೆ ಸುತ್ತುವರೆದು ಹಿಡಿದು, ಆತನ ಹೆಸರು, ವಿಳಾಸ ಕೇಳಲಾಗಿ ಪ್ರಕಾಶ್ ಬಿನ್ ಲೇಟ್ ಮಹದೇವಯ್ಯ, 35 ವರ್ಷ, ಶಿವಪುರ ಎಂದು ತಿಳಿಸಿರುತ್ತಾನೆ. ನಂತರ ಚೀಲದಲ್ಲಿ ಏನಿದೆ ಎಂದು ಪ್ರಶ್ನಿಸಲಾಗಿ ಅದರಲ್ಲಿ ಮದ್ಯ ತುಂಬಿರುವ ಪೌಚ್ ಇರುವುದಾಗಿ ತಿಳಿಸಿದನು. ಇವುಗಳನ್ನು ತೆಗೆದುಕೊಂಡು ಹೋಗಲು ರಹದಾರಿ ಮತ್ತು

ಸಿ.ಸಿಃ1650/2022 ಫ್ರಾಸಾ-07, ಚಾಸಾ-05

ಬಿಲ್ ಇದೇಯೇ ಎಂದು ಕೇಳಿದಾಗ, ಆತನು ಇಲ್ಲ ಎಂದು ತಿಳಿಸಿದ್ದು, ಎಲ್ಲಿಂದ ತಂದೆ ಎಂದು ಕೇಳಲಾಗಿ ಹೇಳಲೂ ನಿರಾಕರಿಸಿರುತ್ತಾನೆ. ನಂತರ ಚಾಸಾ-2 ಮತ್ತು 3 ರವರ ಸಮಕ್ಷಮ ಚೀಲವನ್ನು ತೆರೆದು ನೋಡಲಾಗಿ 90 ಎಂ.ಎಲ್.ನ ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 30 ಪೌಚ್ ಗಳಿದ್ದು ಪ್ರತಿಯೊಂದು ಪೌಚ್‌ಗಳ ಮೇಲೆ ಅಬಕಾರಿ ಕಮೀಷನರ್ ರವರ ಸಹಿವುಳ್ಳ ಲೇಬಲ್ ಅಂಟಿಸಲಾಗಿರುತ್ತದೆ. ಮತ್ತೊಂದು ಬದಿಯಲ್ಲಿ MRP 35.15 ಎಂದು ನಮೂದಾಗಿರುತ್ತದೆ. ಇವುಗಳ ಒಟ್ಟು ಬೆಲೆ 1,053/- ಆಗಿರುತ್ತದೆ. ನಂತರ 30 ಟೆಟ್ರಾ ಪ್ಯಾಕ್‌ಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಹೊಲೆದು "Q" ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಲಾಯಿತು. ಈ ಮಹಜರನ್ನು ಮಃ 3.00 ಗಂಟೆಯಿಂದ 4.00 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಮುದ್ದೆಮಾಲುಗಳು ಮತ್ತು ಆರೋಪಿಯನ್ನು ವಶಪಡಿಸಿಕೊಂಡು ಠಾಣೆಗೆ ಬಂದಿರುತ್ತೇವೆ. ಸಾಕ್ಷಿಗೆ ನಿಪಿ-1 ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 30 ಟೆಟ್ರಾ ಪ್ಯಾಕ್‌ಗಳನ್ನು ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಈಗಾಗಲೇ ಒಟ್ಟಾಗಿ ಮು.ಮಾ.-1 ಎಂದು ಗುರುತಿಸಲಾಗಿದೆ. ಬಿಳಿ ಪ್ಲಾಸ್ಟಿಕ್ ಚೀಲವನ್ನು ಈಗಾಗಲೇ ಮು.ಮಾ-2 ಎಂದು ಗುರುತಿಸಲಾಗಿದೆ. ಠಾಣಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

(ಪಾಟೀಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.